ಬಂಟ್ವಾಳ ಪುರಸಭಾ ಕ್ಷೇತ್ರದ ಜನತೆಗೆ ಕುಡಿಯಲುವ ನೀರಿನ ಯೋಜನೆ

೧೦೫೭. ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಹಿಂದೆ ಒಂದು ಯೋಜನೆಯನ್ನು ತಯಾರಿಸಲಾಗಿತ್ತೆ ?

ಇ) ಹಾಗಿದ್ದರೆ ಯೋಜನೆ ಕಾರ್ಯಗತವಾಗದೇ ಇರಲು ಕಾರಣವೇನು ?

ಈ) ಯಾವಾಗ ಇದನ್ನು ಕಾರ್ಯಗತಗೊಳಿಸಲಾಗುವುದು ?

ಶ್ರೀ ಟಿ. ವೆಂಕಪ್ಪನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ಒಂದು ಕುಡಿಯುವ ನೀರಿನ ಅಭಿವೃದ್ಧಿ ಯೋಜನೆಯನ್ನು ೧೯೮೬ರಲ್ಲಿ ರೂ. ೮೮.೫೦ ಲಕ್ಷಗಳಿಗೆ ತಯಾರಿಸಲಾಗಿದೆ.

ಇ) ಬಂಟ್ವಾಳ ಪುರಸಭೆಯವರು ತಮ್ಮ ವತಿಯಿಂದ ತುಂಬಬೇಕಾದ ಹಣವನ್ನು ಆರ್ಥಿಕ ಮುಗ್ಗಟ್ಟಿನ ಹೊಂದರೆಯಿಂದ ತುಂಬಲು ಒಪ್ಪದೆ ಇರುವ ಕಾರಣ ಈ ಯೋಜನೆಯನ್ನು ತೆಗೆದುಕೊಳ್ಳಲಾಗಲಿಲ್ಲ.

ಈ) ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಿದ ನಂತರ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

ಸರ್ಕಾರಿ ಮತ್ತು ಅನುದಾನಿತ ಖಾಸಗಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ.

೯೧೧. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಸರ್ಕಾರಿ ಮತ್ತು ಅನುದಾನಿತ ಖಾಸಗಿ ಶಾಲೆಗಳಲ್ಲಿ ಶಿಕ್ಷಕರು ಕೊರತೆ ಇರುವುದು ನಿಜವೆ ?

ಆ) ಈ ಕೊರತೆಗೆ ಕಾರಣಗಳೇನು ?

ಶ್ರೀ ಕೆ. ಹೆಚ್ ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ನಿಜ

ಆ) ಆರ್ಥಿಕ ಮಿತವ್ಯಯ ಆದೇಶಗಳು ಜಾರಿಯಲ್ಲಿದ್ದುದರಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿಲ್ಲ.

ಮೂಡಿಗೆರೆಯಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭ

೯೧೪. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಮೂಡಿಗೆರೆ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲು ಯಾವಾಗ ಮಂಜೂರಾತಿ ನೀಡಲಾಯಿತ್ತು?

ಆ) ಈ ಕಾಲೇಜಿಗೆ ಡಿ. ಎಸ್. ಬಿಳೀಗೌಡರ ಹೆಸರನ್ನು ನಾಮಕರಣ ಮಾಡಲಾಗಿದೆಯೇ ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—

ಅ) ಈ ಕಾಲೇಜನ್ನು ೧೯೮೩-೮೪ನೇ ಸಾಲಿನಲ್ಲಿ ಪ್ರಾರಂಭಿಸಲು ಮಂಜೂರಾತಿ ನೀಡಲಾಯಿತ್ತು.

ಆ) ಹೌದು.—

ಇ) ದಾನಿಗಳ ಸಲಹೆಯಂತೆ ಈ ಕಾಲೇಜಿಗೆ ಶ್ರೀ ಡಿ. ಎಸ್. ಬಿಳೀಗೌಡರ ಹೆಸರನ್ನು ಇಡಲಾಗಿದೆ.